ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ರವರ ನ್ಯಾಯಾಲಯ ಮೊಳಕಾಲ್ಮೂರು

ದಾವಾ ಸಂಖ್ಯೆ: ಓ.ಎಸ್. ಸಂಖ್ಯೆ: 40/2017

ಪಿ.ಡಬ್ಲ್ಯೂ.1

ದಿನಾಂಕ: 08.01.2020 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋದಿಸಲಾಯಿತು.

ಪಾಟಿ ಸವಾಲು : ಶ್ರೀ.ಎಲ್.ಪಿ.ಪಿ. ವಕೀಲರಿಂದ

ನಾನು ಪಿ.ಯು.ಸಿ.ವರೆಗೂ ವಿದ್ಯಾಭ್ಯಾಸ ಮಾಡಿರುತ್ತೇನೆ. ಸಾಕ್ಷಿಗೆ ನಿಪಿ 3 ನ್ನು ತೋರಿಸಲಾಗಿ ಅದರ ಮೋದಲನೇ ಪುಟ್ಟದಲ್ಲಿರುವ ಅಕ್ಷರಗಳು ಒಂದೇ ಸಮನೇ ದೊಡ್ಡ ಅಕ್ಷರಗಳಲ್ಲಿ ಬರೆಯಲಾಗಿದೆ ಮತ್ತು 2 ನೇ ಪುಟದಲ್ಲಿ ದೊಡ್ಡ ಮತ್ತು ಸಣ್ಣಸಣ್ಣದಾದ ಅಕ್ಷರಗಳಲ್ಲಿ ಬರೆಯಲಾಗಿದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಪಂಚಾಯಿತಿಯವರು ಬರೆದಿರುತ್ತಾರೆ ಎಂದು ನುಡಿದಿರುತ್ತಾರೆ. ಪಂಚಾಯಿತಿಯಲ್ಲಿ ಯಾರು ಬರೆದಿರುತ್ತಾರೆ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಹಾಗೂ ಅದರ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದು ನುಡಿದಿರುತ್ತಾರೆ. ಆ ದಿನ ದಿ: 12.09.2014 ರಂದು ನಾನು ಖುದ್ದಾಗಿ ಹೋಗಿರುವುದಿಲ್ಲ ಎಂದು ನುಡಿದಿರುತ್ತಾರೆ. ಸಾಕ್ಷಿಗೆ 2 ಪೋಟೋಗಳನ್ನು ತೋರಿಸಲಾಗಿ ಅದರಲ್ಲಿಜಗಳುರಯ್ಯನವರ ಮನೆ ಇದೆ ಎಂದು ತಿಳಿಸಿದ್ದು, ಸದರಿ ಪೊಟೋಗಳನ್ನು ನಿಡಿ 1 ಮತ್ತು 2 ಎಂದು ಮತ್ತು ಒಂದು ಸಿ.ಡಿ.ಯನ್ನು ನಿಡಿ 3 ಎಂದು ಗುರುತಿಸಲಾಯಿತು. ಸದರಿ ಪೊಟೋಗಳಲ್ಲಿ ಜಗಳೂರಯ್ಯನವರು ನಿಂತಿದ್ದಾರೆ ಎಂದರೆ ಸರಿ. ಜಗಳೂರಯ್ಯನವರು ನಿಂತು ಕೊಂಡಿರುವ ಜಾಗದಲ್ಲಿ ತೆಂಗಿನ ಮರ ಇದೆ ಎಂದರೆ ಸರಿ. ತೆಂಗಿನ ಮರದ ಪಕ್ಕದಲ್ಲಿ ಕಲ್ಲುಗಳು ಇವೆ ಎಂದರೆ ಸರಿ. ಸದರಿ ಕಲ್ಲುಗಳು ಸೈಜು ಕಲ್ಲುಗಳು ಎಂದರೆ ಸರಿ. ಸಾಕ್ಷಿಯು ಮುಂದುವರೆದು ಪೊಲೀಸರು ಬಂದು ತೆಗೆಯಬೇಕು ಎಂದು ಹೇಳಿದ ಸಮಯಕ್ಕೆ ತೆಗೆಯುತ್ತಾರೆ ಮತ್ತು ಪೊಲೀಸ ಠಾಣೆಯಲ್ಲಿ ಬಂದು ತೊಂದರೆ ಮಾಡುವುದಿಲ್ಲ ಎಂದು ಮುಚ್ಚಳಿಕೆ ಬರೆದುಕೊಟ್ಟು ಬಂದು ಮತ್ತು ಅಧೇ ರೀತಿ ಕಲ್ಲುಗಳನ್ನುಹಾಕುತ್ತಾರೆ ಎಂದು ನುಡಿದಿರುತ್ತಾರೆ. ನಾನು ಪೊಲೀಸ ಠಾಣೆಯಲ್ಲಿ ಪ್ರತಿವಾದಿಯವರಿಂದ ನಮಗೆ ಸ್ವಾದೀನ ಬಿಡಿಸಿಕೊಡಬೇಕೆಂದು ದೂರನ್ನು ನೀಡಿರುತ್ತೇವೆ ಎಂದರೆ ಸರಿ. ಪ್ರತಿವಾದಿಯವರು ತಮ್ಮ ಮನೆ ಮತ್ತು ಮನೆಯ ಪಕ್ಕದ ಖಾಲಿ ಜಾಗದಲ್ಲಿ ಪ್ರತಿವಾದಿಯವರೇ

ಸ್ವಾದೀನದಲ್ಲಿ ಇರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಬರೀ ಮನೆಯಲ್ಲಿರುತ್ತಾರೆ ಖಾಲಿ ಜಾಗದಲ್ಲಿ ಇರುವುದಿಲ್ಲ ಎಂದು ನುಡಿದಿರುತ್ತಾರೆ. ನ್ಯಾಯಾಲಯದ ಕಮೀಷನರ್ ನ್ನು ನೇಮಕ ಮಾಡಿ ದಾವಾ ಆಸ್ತಿಯಲ್ಲಿ ಪ್ರತಿವಾದಿಯರು ಸ್ವಾದೀನದಲ್ಲಿದ್ದಾರೆಯೇ ಇಲ್ಲವೋ ಎಂಬುವದನ್ನು ತನಿಖೆ ಮಾಡಿಸುವುದರಲ್ಲಿ ನನಗೆ ತೊಂದರೆ ಇದೆಯೇ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿದಿರುತ್ತಾರೆ.

**ಮುಂದುವರೆದ ಪಾಟೀ ಸವಾಲಿಗೆ ವಕೀಲರು ಸಮಯಾವಕಾಶ ಕೋರಿದ್ದರಿಂದ ಮುಂದೂಡಲಾಯಿತು.**

(**ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು**)

**ಓ.ಹೇ.ಕೇ.ಸರಿ ಇದೆ**

ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ

ಮೊಳಕಾಲ್ಮೂರು.